**ಇಂದು ದಿನಾಂಕ:18.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ದಾವಾ ಐಟಂ ನಂಬರ್ 1 ರಲ್ಲಿ 1 ಎಕರೆ 3½ ಗುಂಟೆ ವಿಸ್ತೀರ್ಣ ಇದೆ. ತಮ್ಮೇಗೌಡರು ಬರೆಸಿಕೊಂಡಿರುವ ಕ್ರಯ ಪತ್ರದಲ್ಲಿ ಸ.ನಂ.2/3 ರ ಪೂರ್ವಕ್ಕೆ ದೊಡ್ಡತಮ್ಮೇಗೌಡರ ಜಮೀನು, ಪಶ್ಚಿಮಕ್ಕೆ ಪುಟ್ಟೇಗೌಡರ ಜಮೀನು, ದಕ್ಷಿಣಕ್ಕೆ ಕಿತ್ತೂರು–ಬೆಟ್ಟದಪುರ ರಸ್ತೆ ಮತ್ತು ಉತ್ತರಕ್ಕೆ ಪುಟ್ಟೇಗೌಡರ ಜಮೀನು ಇರುತ್ತದೆ. ಆ ಕ್ರಯ ಪತ್ರದಲ್ಲಿ 1 ಎಕರೆ 3½ ಮಾರಾಟ ಮಾಡಿರುವುದಾಗಿ ಬರೆಯಲಾಗಿದೆ. ಸ.ನಂ.3/3 ರಲ್ಲಿ ಒಟ್ಟು 36 ಗುಂಟೆ ಇದೆ. ತಮ್ಮೇಗೌಡರು ಕ್ರಯಕ್ಕೆ ತೆಗೆದುಕೊಂಡಿರುವ ಜಮೀನಿನ ದಕ್ಷಿಣಕ್ಕೆ ಕಿತ್ತೂರು ಬೆಟ್ಟದಪುರ ರಸ್ತೆ, ಉತ್ತರಕ್ಕೆ ಪುಟ್ಟೇಗೌಡರ ಜಮೀನು, ಪಶ್ಚಿಮಕ್ಕೆ ಮಾಳಿ ಜವರೇಗೌಡರ ಜಮೀನು, ಪೂರ್ವಕ್ಕೆ ಸ.ನಂ.2/3 ರ ಜಮೀನು ಇರುತ್ತದೆ. ಈ ಮೇಲೆ ಹೇಳಿದ ಚೆಕ್ಕುಬಂಧಿಗಳು ಈಗ ಇರುವುದಿಲ್ಲ. ಈಗ ದಾವಾ ಐಟಂ ನಂಬರ್ 1 ರ ಪೂರ್ವಕ್ಕೆ ಡಿ.ಕೆ.ನಾಗರಾಜುರವರ ಜಮೀನು, ಪಶ್ಚಿಮಕ್ಕೆ ಸ.ನಂ.3/3 ರ ಜಮೀನು, ದಕ್ಷಿಣಕ್ಕೆ ಕಿತ್ತೂರು–ಬೆಟ್ಟದಪುರ ರಸ್ತೆ, ಉತ್ತರಕ್ಕೆ ರಮೇಶರವರ ಜಮೀನು ಇರುತ್ತದೆ. ಡಿ.ಕೆ.ನಾಗರಾಜುರವರ ತಂದೆಯ ಹೆಸರು ಕರೀಗೌಡರು. ದಾವಾ ಐಟಂ ನಂಬರ್ 1 ರ ಪೂರ್ವ ದಿಕ್ಕಿನಲ್ಲಿರುವ ಡಿ.ಕೆ.ನಾಗರಾಜುರವರಿಗೆ ಜಮೀನು ಅವರ ಪೂರ್ವಜರಿಂದ ಬಂದಿದೆ. ಸ.ನಂ.2/1 ರ ಪಕ್ಕಕ್ಕೆ ವಸಂತರಾಜೇಅರಸ್ ರವರ ಜಮೀನು ಇದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಅಥವಾ ಸ.ನಂ.2/1 ರ ಪಕ್ಕದಲ್ಲಿಯೂ ಮೈತ್ರೇಯಮ್ಮನವರ ಜಮೀನು ಇರುವುದಿಲ್ಲ. ದಾವಾ ಐಟಂ ನಂಬರ್ 1 ರ ಉತ್ತರ ದಿಕ್ಕಿನಲ್ಲಿರುವ ರಮೇಶರವರ ಜಮೀನು ಹೇಗೆ ಬಂತು ಎಂದು ಗೊತ್ತಿಲ್ಲ. ದಾವಾ ಐಟಂ ನಂಬರ್ 2 ರ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರದಲ್ಲಿರುವ ಚೆಕ್ಕುಬಂಧಿಗೂ ಈಗ

ಇರುವ ಚೆಕ್ಕುಬಂಧಿಗೂ ವ್ಯತ್ಯಾಸ ಇದೆ. ದಾವಾ ಐಟಂ ನಂಬರ್ 2 ರ ಪೂರ್ವಕ್ಕೆ ಕೃಷ್ಣೇಗೌಡ ಮತ್ತು ಕಲ್ಲೇಶ ಸ್ವಾಧೀನದಲ್ಲಿದ್ದಾರೆ, ಪಶ್ಚಿಮಕ್ಕೆ ಗಗನರವರ ಜಮೀನು ಅವರಿಗೆ ಜಮೀನು ಹೇಗೆ ಬಂತು ಎಂದು ಗೊತ್ತಿಲ್ಲ, ಉತ್ತರಕ್ಕೆ ಪ್ರತಿವಾದಿ ಕೃಷ್ಣೇಗೌಡರ ಜಮೀನು, ದಕ್ಷಿಣಕ್ಕೆ ಕಿತ್ತೂರು ಬೆಟ್ಟದಪುರದ ರಸ್ತೆ ಇರುತ್ತದೆ. ಪ್ರತಿವಾದಿಗೆ ಜಮೀನು ಹೇಗೆ ಬಂತು ಎಂದು ಗೊತ್ತಿಲ್ಲ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಸ.ನಂ.3/6 ಕ್ಕೆ ದಾನ ಪತ್ರ ಬರೆದಿದ್ದಾರೆ ಎಂದು ದಾನ ಪತ್ರವನ್ನು ನೋಡಿ ಒಪ್ಪಿಕೊಂಡ ಮೇರೆಗೆ ಸದರಿ ಪತ್ರವನ್ನು **ನಿ.ಡಿ–1** ಎಂದು ಗುರುತಿಸಲಾಯಿತು. ವಾದಿಗಳ ತಂದೆಗೆ ಆರ್.ಟಿ.ಸಿ ನಮೂದಾಗಿಲ್ಲ ಮ್ಯುಟೇಷನ್ ಇದೆ. ಸ.ನಂ.3/3 ಸ.ನಂ.3/6 ಆಗಿರುವ ಬಗ್ಗೆ ದಾಖಲೆ ಇರುವುದಿಲ್ಲ. 1968 ರಿಂದ 2023 ರವರೆಗೆ ವಾದಿ ತಂದೆಯ ಹೆಸರಿನಲ್ಲಿ ಅಥವಾ ವಾದಿಗಳ ಹೆಸರಿನಲ್ಲಿ ಆರ್.ಟಿ.ಸಿ ನಮೂದಾಗಿಲ್ಲ. ತಮ್ಮೇಗೌಡರ ಕಾಲದಿಂದಲೂ ದಾವಾ ಆಸ್ತಿಗಳನ್ನು ಇದುವರೆಗೂ ಅಳತೆ ಮಾಡಿಲ್ಲ. ಸ.ನಂ.2 ರಲ್ಲಿ ಒಟ್ಟು 3 ಪೋಡುಗಳಾಗಿವೆ. ಸ.ನಂ.2/1 ರಲ್ಲಿ 1 ಎಕರೆ 28 ಗುಂಟೆ ಇದೆ, ಸ.ನಂ.2/2 ರಲ್ಲಿ 1 ಎಕರೆ 28 ಗುಂಟೆ ಇದೆ. ಸ.ನಂ.2 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ಸ.ನಂ.2 ರಲ್ಲಿ ಯಾರು ಯಾರು ಮಾಲೀಕತ್ವ ಮತ್ತು ಸ್ವಾಧೀನದಲ್ಲಿದ್ದಾರೆ ಎಂದು ಮಾಹಿತಿ ಇದೆ. ಸ.ನಂ.2/2 ರಲ್ಲಿ ಜಯಮ್ಮ ಲೇಟ್ ಲಕ್ಕೇಗೌಡ ಹೆಸರಿನಲ್ಲಿದೆ. ಸ.ನಂ.2/1 ಸಾವಿತ್ರಮ್ಮನವರ ಹೆಸರಿನಲ್ಲಿದೆ. ಸಾವಿತ್ರಮ್ಮ ವಾದಿಗಳಿಗೆ ಏನು ಸಂಬಂಧ ಎಂದು ಗೊತ್ತಿಲ್ಲ. ಅವರು ರಕ್ತ ಸಂಬಂಧಿಗಳಲ್ಲ. ಸ.ನಂ.2/3 ರ ಆರ್.ಟಿ.ಸಿ ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ದಾವಾ ಐಟಂ ನಂಬರ್ 1 ರ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ಆರ್.ಟಿ.ಸಿ ಬಂದು 20 ವರ್ಷ ಆಗಿರಬಹುದು. ಸ.ನಂ.3/3 ರ ಆರ್.ಟಿ.ಸಿ ಕೃಷ್ಣೇಗೌಡರ ಹೆಸರಿನಲ್ಲಿದೆ ಅವರ ಹೆಸರಿಗೆ ಬಂದು 20 ವರ್ಷಗಳಾಗಿದೆ. ದಾವಾ ಸಲ್ಲಿಸುವ ಕಾಲಕ್ಕೆ ಸ.ನಂ.3/3

ರ ಆರ್.ಟಿ.ಸಿ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಕೇಸು ಹಾಕಿದ ನಂತರ 2 ನೇ ಪ್ರತಿವಾದಿಯ ಹೆಸರಿಗೆ ಆಗಿದೆ. ಆ ರೀತಿ ಪ್ರತಿವಾದಿಗಳ ಹೆಸರಿನಲ್ಲಿ ಆರ್.ಟಿ.ಸಿ ಇರುವುದನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ದಾವಾ ಆಸ್ತಿಗಳಿಗೆ ವಾದಿಗಳಾಗಲೀ ಅಥವಾ ಅವರ ತಂದೆಯಾಗಲೀ ಕಂದಾಯ ಕಟ್ಟಿದ್ದಾರಾ ಎಂದರೆ ಹೌದು. ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಕಂದಾಯದ ರಶೀದಿಗಳನ್ನು ಕೊಟ್ಟಿರುವುದಾಗಿ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊನೆಯ ಬಾರಿಗೆ 1980–81 ರಲ್ಲಿ ಕಂದಾಯ ಕಟ್ಟಿರಬಹುದು. ಮೊದಲ ಬಾರಿಗೆ ಯಾವಾಗ ಕಂದಾಯ ಕಟ್ಟಿದ್ದಾರೆ ಎಂದು ಗೊತ್ತಿಲ್ಲ. ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳನ್ನು ದಿನಾಂಕ 31.01.2000 ರಂದು 1 ನೇ ಪ್ರತಿವಾದಿ ಮೈತ್ರೆಯಮ್ಮರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಪೂರ್ವಕ್ಕೆ ವಸಂತರಾಜೇಅರಸರವರ ಜಮೀನು, ಪಶ್ಚಿಮಕ್ಕೆ ಪಾಪೇಗೌಡರ ಜಮೀನು, ಉತ್ತರಕ್ಕೆ ಗವೀಗೌಡರ ಜಮೀನು, ದಕ್ಷಿಣಕ್ಕೆ ಹೊಲದೇಗೌಡರ ಜಮೀನು ಈ ಮಧ್ಯೆ ಇರುವ 2 ಎಕರೆ 7 ಗುಂಟೆಗೆ ವಾದಿಗಳಿಗೆ ಹಕ್ಕು ಇದೆಯಾ ಎಂದರೆ 1 ಎಕರೆ 3½ ಗುಂಟೆ ವಾದಿಗಳಿಗೆ ಇದೆ. ಸ.ನಂ.2/3 ರಲ್ಲಿ 2 ಎಕರೆ 7 ಗುಂಟೆ ಜಮೀನು ಇದೆ ಎಂದರೆ ಸರಿ. ಪೂರ್ವಕ್ಕೆ ಕರೀಗೌಡ ವಗೈರೆರವರ ಜಮೀನು, ಪಶ್ಚಿಮಕ್ಕೆ ಜವರೇಗೌಡರ ಜಮೀನು, ಉತ್ತರಕ್ಕೆ ಕರೀಗೌಡರ ಜಮೀನು ಮತ್ತು ದಕ್ಷಿಣಕ್ಕೆ ಲಕ್ಕೇಗೌಡರ ಜಮೀನು ಈ ಚೆಕ್ಕುಬಂಧಿಯೊಳಗೆ ಇರುವ 32 ಗುಂಟೆ ಜಮೀನಿನಲ್ಲಿ ವಾದಿಗಳಿಗೆ ಹಕ್ಕು ಇದೆಯಾ ಎಂದರೆ ಹೌದು. ಈಗ ಹೇಳಿದ ಚೆಕ್ಕುಬಂಧಿ ಸ.ನಂ.3/3 ರ 32 ಗುಂಟೆ ಜಮೀನು ಎಂದರೆ ಸರಿ. ಈ ಜಮೀನು ಮೂಲತಃ ಮೈತ್ರೇಯಮ್ಮನವರಿಗೆ ಸೇರಿತ್ತು ಎಂದರೆ ಗೊತ್ತಿಲ್ಲ. ಮೈತ್ರೇಯಮ್ಮ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು ಖಾತೆ ಮೈತ್ರೇಯಮ್ಮನವರ ಹೆಸರಿನಲ್ಲಿತ್ತು ಎಂದರೆ

ಸರಿಯಲ್ಲ. ಮೈತ್ರೇಯಮ್ಮನವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಅವರ ಹೆಸರಿಗೆ ಖಾತೆ ಬಂದಿದೆ ಎಂದರೆ ಅವರು ಯಾವಾಗ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ ಆದರೆ ಅವರ ಹೆಸರಿಗೆ ಖಾತೆ ಬಂದಾಗಿತ್ತು. ದಾನ ಪತ್ರದ ಮೇರೆಗೆ 2 ನೇ ಪ್ರತಿವಾದಿಯ ಹೆಸರಿಗೆ ಖಾತೆಗಳು ಹೋಗಿವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗಳು ಸ್ವಾಧೀನ ಇರುವುದನ್ನು ನಾಗರಾಜು, ಜವರೇಗೌಡರು, ಸಣ್ಣತಮ್ಮೇಗೌಡರವರು ನೋಡಿದ್ದಾರೆ. ದಾವಾ ಐಟಂ ನಂಬರ್ 1 ರ ಉತ್ತರ ಪಶ್ಚಿಮ ದಿಕ್ಕಿನಲ್ಲಿರುವ ರಮೇಶ ಮತ್ತು ಗಗನರವರು ಸಹ ನೋಡಿದ್ದಾರೆ. ವಾದಿಗಳಿಗೂ ಕಲ್ಲೇಶರವರಿಗೂ ಯಾವುದೇ ಸಂಬಂಧವಿಲ್ಲ ಒಂದೇ ಸಮುದಾಯದವರು ಹಾಗೂ ಆತ್ಮೀಯ ಸ್ನೇಹಿತರಲ್ಲ. ಪ್ರತಿವಾದಿಗಳು ತಂಟೆ ತಕರಾರು ಮಾಡಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. 2022 ರಿಂದ ತಂಟೆ ತಕರಾರು ಶುರುವಾಗಿದೆ. ದಾವಾ ಆಸ್ತಿಗಳಲ್ಲಿ ವಾದಿಗಳು ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ಕ್ರಯ ಪತ್ರ ಮತ್ತು ಮ್ಯುಟೇಷನ್ ಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ–9 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ನಾನು 10 ನೇ ತರಗತಿ ಓದಿದ್ದೇನೆ. ನಿ.ಪಿ–9 ರಲ್ಲಿ ಗ್ರಾಮ ಲೆಕ್ಕಿಗರ ಸಹಿ ಇದೆ ಮತ್ತು ಸೀಲು ಇರುವುದಿಲ್ಲ. ಆ ಸಮಯದಲ್ಲಿ ಯಾರು ಗ್ರಾಮ ಲೆಕ್ಕಿಗರು ಆಗಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಗಳನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**